**CC 1321/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1321/2023

**ಸಿ ಡಬ್ಲೂ** -5
**ಪಿ ಡಬ್ಲೂ** -4

| | |
|---|---|
| **ಸಾಕ್ಷಿಯ ಹೆಸರು -** | **ಉಮೇಶ್** |
| **ತಂದೆಯ ಹೆಸರು -** | **ತಿಮ್ಮಪ್ಪ** |
| **ವಯಸ್ಸು -** | 29 **ವರ್ಷಗಳು** |
| **ಉದ್ಯೋಗ -** | **ಖಾಸಗಿ ಕೆಲಸ** |
| **ವಾಸಸ್ಥಳ -** | **ಕಮಲಾಪುರ** |

**ಸಾಕ್ಷಿಯನ್ನು ದಿನಾಂಕಃ** 06-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **1** ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿಃ **1(**ಡಿ**)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು **2022** ರಲ್ಲಿ ಹಂಪಿ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸರು ನನ್ನನ್ನು ಕರೆದು ಸಹಿ ಮಾಡು ಎಂದಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಯಾವುದೇ ವಸ್ತು ಜಪ್ತುಪಡಿಸಿಕೊಂಡಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ,

ಈಗ ನಾನು ನೋಡುತ್ತಿರುವ **2** ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿಃ **2** ಎಂದು

ಗುರುತಿಸಲಾಯಿತು. ನಿಪಿಃ **2** ರ ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 19-09-2022 ರಂದು ಹಂಪಿ ಪೋಲಿಸರು ನನ್ನನ್ನು ಮತುತ ಚಾಸಾ -4 ರವರನ್ನು ಠಾಣೆಗೆ ಕರೆಯಿಸಿ ಚಾಸಾ -1 ರವರನ್ನು ಪರಿಚಯಿಸಿದ್ದರು ಅಂದರೆ ಸರಿಯಲ್ಲ. ಚಾಸಾ -1 ರವರು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಒಂದು ಪಡಿತರ ಅಕ್ಕಿ ಚೀಲಗಳಿದ್ದ ಪ್ಯಾಸೆಂಜರ್ ಆಟೋ ಸಂಖ್ಯೆ ಕೆ ಎ 35 ಎ 2153 ಯನ್ನು ಬೆಳಿಗೆಗ 9.30 ಗಂಟೆಗೆ ಹೊಸ ಮಲಪನಗುಡಿ ಗ್ರಾಮದಲ್ಲಿ ಹಿಡಿದಿರುವುದಾಗಿ ಮತ್ತು ಸದರಿ ಆರೋಪಿಯನ್ನು ಹಾಗೂ ಆಟೋವನ್ನು ಬೆಳಿಗ್ಗೆ 11.00 ಗಂಟೆಗೆ ಠಾಣೆಯ ಪಿಎಸ್ ಐ ರವರ ಮುಂದ ಹಾಜರು ಪಡಿಸಿದರು ಎಂದು ತಿಳಿಸಿದರು ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ 8 ಅಕ್ಕಿ ಪಡಿತರ ಚೀಲಗಳನ್ನು ಮತ್ತು ಆಟೋವನ್ನು ಜಪ್ತುತ ಪಡಿಸಿಕೊಳ್ಳಲಾಗಿತ್ತು ಅಂದರೆ ಸರಿಯಲ್ಲ. ಪ್ರತಿ ಅಕ್ಕಿ ಚೀಲವು 40 ಕೆಜಿ ತೂಕದ್ದಾಗಿತ್ತು ಅಂದರೆ ಸರಿಯಲ್ಲ. ಸದರಿ ಚೀಲಗಳಿಂದ 1 ಕೆ ಜಿ ಯಷ್ಟು ಮಾದರಿ ಅಕ್ಕಿಯನ್ನು ತೆಗೆಯಲಾಗಿತ್ತು ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಆ ದಿನ ಸ್ಥಳದಲ್ಲಿ ಹಾಜರಿದ್ದ ಅಂದರೆ ಸರಿಯಲ್ಲ. ಮುದ್ದೆಮಾಲು 1 ರ ಚೀಲದಲ್ಲಿಯೇ ಮಾದರಿ ಅಕ್ಕಿಯನ್ನು ತೆಗೆಯಲಾಗಿತುತ ಅಂದರೆ ಸರಿಯಲ್ಲ. ನಿಪಿಃ 2 ರ ಪೊಟೋಗಳನ್ನು ಆಗಲೇ ತಗೆಯಲಾಗಿದೆ ಅಂದರೆ

ಸರಿಯಲ್ಲ. ನನ್ನ ಸಮಕ್ಷಮ ಸದರಿ ಪಂಚನಾಮೆ ಮಾಡಿ ಆಟೋ ಹಾಗೂ ಅಕ್ಕಿ ಚೀಲಗಳನ್ನು ಮತುತ ಮಾದರಿ ಅಕ್ಕಿಯನ್ನು ಜಪ್ತು ಪಡಿಸಿಕೊಂಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿತದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದಃ** ಇಲ್ಲಾ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.